ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಲಘಟಗಿ

ಸಿ.ಸಿ ನಂ.2078-2022

| | |
|---|---|
| ಪಿರ್ಯಾದಿದಾರರು | ಕರ್ನಾಟಕ ಸರಕಾರದ ಪರವಾಗಿ<br>ಕಲಘಟಗಿ ಪೋಲಿಸ ಠಾಣೆ. |
| ಆಪಾದಿತ | ಮಹಾಲಿಂಗಪ್ಪ ಕಲ್ಲಪ್ಪ ಮಿರ್ಜಿ<br>ವಯಾಃ 28 ವರ್ಷ, ಉಃ ಚಾಲಕ<br>ಸಾಃ ಮಲಕನಕೊಪ್ಪ, ತಾಃ ಕಲಘಟಗಿ . |

**ಆಪಾದನೆ**

ಶ್ರೀ ಗಣೇಶ ಎನ್, ಎಂ ಎ ಎಲ್ ಎಲ್ ಬಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ಗಳು ಕಲಘಟಗಿ ಆದ ನಾನು ನಿಮ್ಮ ಮೇಲೆ ಹೊರಿಸುವ ಆಪಾದನೆ ಈ ಕೆಳಗಿನಂತಿದೆ.

ಕಲಘಟಗಿ ಪೋಲಿಸ ಠಾಣೆಯ ಸರಹದ್ದಿಯ ಕಲಘಟಗಿ–ಹುಬ್ಬಳ್ಳಿ ಎನ್ಎಚ–63 ರಸ್ತೆಯ ತಡಸ ಕ್ರಾಸ ಸಮೀಪ ದಿನಾಂಕಃ 12–06–2022 ರಂದು ಮುಂಜಾನೆ 10–30 ಗಂಟೆ ಸುಮಾರಿಗೆ ಆಪಾದಿತನಾದ ನೀನು ಚಾಲನೆ ಮಾಡುತ್ತಿದ್ದ ಕ್ರೂಸರ ವಾಹನ ನಂ. ಕೆಎ–23 ಎನ್–6045 ನೇದ್ದನ್ನು ತಡಸ ಕ್ರಾಸ ಕಡೆಯಿಂದ ಕಲಘಟಗಿ ಕಡೆಗೆ ಅತಿ ಜೋರು ವ ಅಲಕ್ಷತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ರೀತಿಯಲ್ಲಿ ಚಲಾಯಿಸಿಕೊಂಡು ಬಂದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 279 ಅಡಿಯಲ್ಲಿ ಅಪಾರಾಧವನ್ನು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀನು ನಡೆಸುತ್ತಿದ್ದ ಕ್ರೂಸರ ವಾಹನ ನಂ. ಕೆಎ–23 ಎನ್–6045 ನೇದ್ದನ್ನು ನೇದ್ದನ್ನು ತಡಸ ಕ್ರಾಸ ಕಡೆಯಿಂದ ಕಲಘಟಗಿ ಕಡೆಗೆ ಅತಿ ಜೋರು ವ ಅಲಕ್ಷತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ತಡಸ ಕ್ರಾಸ ಹತ್ತಿರದ ಹೊಲದ ಹತ್ತಿರ ರಸ್ತೆ ಮೇಲೆ ತನ್ನ ಕ್ರೂಸರ ಮಾಹನದಲ್ಲಿ ಹಿಂದೆ ಕುಳಿತ ಗಣಪತಿ ತಂದೆ ವಿಷ್ಣುಪಂತ ಉಣಕಲರ ಈತನಿಗೆ ಕೆಳಗೆ ಬೀಳುವಂತೆ ಮಾಡಿ ತಲೆಯ ಹಿಂಭಾಗಕ್ಕೆ ಭಾರಿ ರಕ್ತ ಗಾಯಪಡಿಸಿ ಉಪಚಾರಕ್ಕೆ ಕಿಮ್ಸ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಉಪಚಾರಕ್ಕೆ ದಾಖಲಿಸಿದಾಗ ಉಪಚಾರ ಫಲಿಸದೇ ಮರಣ ಹೊಂದುವಂತೆ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಅಪರಾಧವನ್ನು ನೀವು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಪ್ರಶ್ನೆಃ1) ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?
ಆಪಾದಿತನ ಉತ್ತರಃ
ಪ್ರಶ್ನೆಃ2 ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೊ?
ಆಪಾದಿತನ ಉತ್ತರಃ
( ಆಪಾದಿತನಿಗೆ ಆಪಾದನೆಯನ್ನು ಓದಿ ತಿಳಿಸಿ ನಂತರ ಆಪಾದಿತರ ಉತ್ತರವನ್ನು ಪಡೆಯಲಾಗಿದೆ.)

ಸ್ಥಳಃ ಕಲಘಟಗಿ
ದಿನಾಂಕಃ 04-09-2023

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು
ಕಲಘಟಗಿ.